International Journal of Kannada Research
www.kannadajournal.com

ISSN: 2454–5813
IJKR 2025; 11(4): 15-18
© 2025 IJKR
www.kannadajournal.com
Received: 13-08-2025
Accepted: 16-09-2025

**ಎಸ್. ರಕ್ಷಾ**
ಸಂಶೋಧನಾ ವಿದ್ಯಾರ್ಥಿನಿ ಪರಿಸರ ವಿಜ್ಞಾನ ವಿಭಾಗ ಕ.ರಾ.ಮು.ವಿ ಮೈಸೂರು, ಕರ್ನಾಟಕ, ಭಾರತ

**ಡಾ. ಟಿ. ಎಸ್ ಹರ್ಷ**
ಅಧ್ಯಕ್ಷರು, ಪರಿಸರ ವಿಜ್ಞಾನ ವಿಭಾಗ ಕ.ರಾ.ಮು.ವಿ ಮೈಸೂರು, ಕರ್ನಾಟಕ, ಭಾರತ

**Corresponding Author:**
**ಡಾ. ಟಿ. ಎಸ್ ಹರ್ಷ**
ಅಧ್ಯಕ್ಷರು, ಪರಿಸರ ವಿಜ್ಞಾನ ವಿಭಾಗ ಕ.ರಾ.ಮು.ವಿ ಮೈಸೂರು, ಕರ್ನಾಟಕ, ಭಾರತ

# ಪಾರಂಪರಿಕ ವೈಭವತೆ ಹಾಗೂ ವೈಜ್ಞಾನಿಕ ವೈಶಿಷ್ಟತೆಗಳನ್ನು ಸಾರುವ ಕರ್ನಾಟಕದ ಕೆಲವು ಅಪರೂಪದ ಕಲ್ಯಾಣಿಗಳು

**ಎಸ್. ರಕ್ಷಾ, ಟಿ. ಎಸ್ ಹರ್ಷ**

**DOI:** https://www.doi.org/10.22271/24545813.2025.v11.i4a.1172

**ಪೀಠಿಕೆ**
ಮಲೆನಾಡಿನ ಸುಂದರ ರಮಣೀಯ ಸೌಂದರ್ಯವು ಅನೇಕ ವಿಸ್ಮಯಗಳಿಂದ ಕೂಡಿದ್ದು, ಅವುಗಳಲ್ಲಿ ಪೌರಾಣಿಕ, ಐತಿಹಾಸಿಕ, ಪ್ರಾಕೃತಿಕ ಮತ್ತು ಮಾನವ ನಿರ್ಮಿತ ಪುಷ್ಕರಣಿ/ ಕಲ್ಯಾಣಿಗಳು ಒಂದಾಗಿದೆ. ಪುಷ್ಕರಣಿ, ತೀರ್ಥ, ಕುಂಡ, ಸರೋವರ ಎಂಬ ವಿವಿಧ ಹೆಸರುಗಳಿಂದ ಕರೆಯಲ್ಪಡುವ ಕಲ್ಯಾಣಿಗಳು ಕೇವಲ ಒಂದು ಕಲ್ಯಾಣಿ ಮಾತ್ರವಲ್ಲ ಅದೊಂದು ವಿಸ್ಮಯ ಹಾಗೂ ಅದ್ಭುತ ಜಗತ್ತು. ಸೂಕ್ಷ್ಮವಾಗಿ ಪರಿಗಣಿಸಿ ಈ ಕಲ್ಯಾಣಿಗಳ ಲೋಕವನ್ನು ಆವಿಷ್ಕರಿಸಿದ್ದಲ್ಲಿ ನಮಗೊಂದು ಪವಿತ್ರ ,ವೈಜ್ಞಾನಿಕ, ಧಾರ್ಮಿಕ, ಜೈವಿಕ ಹೀಗೆ ಹತ್ತು ಹಲವು ವೈಶಿಷ್ಟತೆಗಳಲ್ಲದೆ ತಮ್ಮದೇ ಆದ ಚರಿತ್ರೆ ಹಾಗೂ ಪವಾಡಗಳನ್ನು ಸೃಷ್ಟಿಸಿದೆ. ಇಂತಹ ಅಧ್ಬುತ ವೈಶಿಷ್ಟತೆಗಳನ್ನು ಸಾರುತ್ತಿರುವ ಉತ್ತರ ಕರ್ನಾಟಕದ ಪ್ರಮುಖ ಕಲ್ಯಾಣಿಗಳನ್ನು ಪರಿಚಯಿಸಲಾಗಿದೆ.

**ಕಲ್ಯಾಣಿಗಳು**
ಭಾರತದ ದೇವಾಲಯಗಳ ಮುಂಭಾಗದಲ್ಲಿ ಅಥವಾ ದೇವಾಲಯದ ಪ್ರಾಕಾರದಲ್ಲಿ ಒಂದು ಭಾಗವಾಗಿ ನೀರನ್ನು ಸಂಗ್ರಹಿಸುವ ಒಂದು ವ್ಯವಸ್ಥೆಯೇ ಈ ಕಲ್ಯಾಣಿ ಹಾಗೂ ಕಲ್ಯಾಣಿಯ ನೀರನ್ನು ಪವಿತ್ರ ಜಲವೆಂದು ಪರಿಗಣಿಸಲಾಗುವುದು. ಹಾಗಾಗಿಯೇ ಈ ಪವಿತ್ರ ಜಲವನ್ನು ದೇವರ ಪೂಜೆ, ಅಭಿಷೇಕ ಹಾಗೂ ಹಲವು ದೈವಿಕ ಕೈಂಕರ್ಯಗಳಿಗೆ ಬಳಕೆ ಮಾಡಲಾಗುತ್ತದೆ. ಇದರೊಂದಿಗೆ ಹಲವು ಕಲ್ಯಾಣಿಗಳಲ್ಲಿ ಭಕ್ತಾಧಿಗಳು ಮಿಂದು ತಮ್ಮನ್ನು ಶುಚಿಗೊಳಿಸುವಿಕೆಯಲ್ಲಿ, ಪಾಪವಿಮೋಚನೆ ಮಾಡಿಕೊಳುವುದ್ದಕಾಗಿ ಬಳಸುತ್ತಾರೆ. ಈ ಪುಷ್ಕರಣಿಯ ನೀರಿನಲ್ಲಿ ಹಲವು ಔಷಧೀಯ ಗುಣವಿದ್ದು ಇದನ್ನು ಸೇವಿಸಿದರೆ ಅಥವಾ ಇದರಲ್ಲಿ ತೀರ್ಥ ಸ್ನಾನ ಮಾಡಿದರೆ ಹಲವು ರೋಗಗಳು, ಚರ್ಮ ಕಾಯಿಲೆಗಳು ದೂರವಾಗುವುದು ಎಂಬ ಪ್ರತೀತಿಯು ಇದೆ. ಇದಲ್ಲದೆ ಕೆಲವು ಕಲ್ಯಾಣಿಗಳು ಸ್ಮಾರಕವಾಗಿ ಕೂಡ ಪ್ರಚಲಿತಗೊಂಡಿದೆ ಉದಾಹರಣೆಗೆ "ಚಂಪಕ ಸರಸಿ", ಹಲವು ಕಲ್ಯಾಣಿಗಳು ನದಿಗಳ ಉಗಮ ಸ್ಥಾನವು ಕೂಡ ಆಗಿದ್ದು, ಇದನ್ನು ಪರಮ ಪೂಜ್ಯನಿಯ ಎಂದು ಪರಿಗಣಿಸಲಾಗುತ್ತದೆ. ಮಾನವ ನೀರ್ಮಿತ ಕಲ್ಯಾಣಿಗಳು ದೇವರ ತೆಪ್ಪೋತ್ಸವ ಹಾಗೂ ವೈದಿಕ ಕಾರ್ಯಗಳಿಗೂ ಬಳಸಲಾಗುತ್ತದೆ.

ಅಂದಿನ ಕಾಲದಿಂದಲೂ ಕಲ್ಯಾಣಿಗಳ ನಿರ್ಮಾಣಕ್ಕಾಗಿ ಬಹಳಷ್ಟು ಪ್ರಾಮುಖ್ಯತೆಯನ್ನು ಕೊಡಲಾಗುತ್ತಿದ್ದು ದೇವಾಲಯಗಳ ಆಚರಣೆಗಳಲ್ಲಿ ಜಲಮೂಲಗಳು ಪ್ರಮುಖ ಪಾತ್ರ ವಹಿಸುತ್ತವೆ. ಪೂರ್ವಿಕರು ಈ ಕೊಳವನ್ನು ಪವಿತ್ರ ಸ್ನಾನಕ್ಕಾಗಿ, ಸಂಧ್ಯಾ ವಂದನೆ, ಅಭಿಷೇಕ ಹಾಗೂ ತೀರ್ಥಸ್ನಾನದಂತಹ ಇತರ ಪ್ರಮುಖ ಧಾರ್ಮಿಕ ಚಟುವಟಿಕೆಗಳನ್ನು ಉದ್ದೇಶಿಸಿ ಕಲ್ಯಾಣಿಗಳನ್ನು ನಿರ್ಮಿಸಲಾಗುತ್ತಿತ್ತು. ಅಷ್ಟೇಅಲ್ಲದೇ ಈ ಶುದ್ಧ ಜಲ ಪವಿತ್ರ ಮತ್ತು ಪರಿಶುದ್ಧ ಎಂದು ನಂಬುವುದರ ಜೊತೆಯಲ್ಲಿ ನಮ್ಮ ಪಾಪಗಳನ್ನು ತೊಡೆದು ಹಾಕುತ್ತದೆ ಎಂದು ನಂಬಲಾಗುತ್ತದೆ. ವೈಜ್ಞಾನಿಕವಾಗಿ ಕಲ್ಯಾಣಿಗಳು ಅಂತರ್ಜಲವನ್ನು ಪುನಭರ್ತಿ ಮಾಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ತಾಜಾ ನೀರಿನ ಮೂಲವಾಗಿ ಕಾರ್ಯ ನಿರ್ವಹಿಸುತ್ತದೆ ಮತ್ತು ಅವು ವೈವಿಧ್ಯಮಯ ಜಲಚರ ಪ್ರಭೇದಗಳಿಗೆ ಅನನ್ಯ ಆವಾಸಸ್ಥಾನವನ್ನು ಕಲ್ಪಿಸಿಕೊಡುತ್ತದೆ. ಕೆಲವು ಕೊಳಗಳು ದೊಡ್ಡ ನದಿಗಳ ಮೂಲಗಳಾಗಿವೆ ವ್ಯತಿರಿಕ್ತ ದೃಷ್ಟಿಕೋನದಲ್ಲಿ ಸುತ್ತಲೂ ಸಕಾರಾತ್ಮಕ ಮತ್ತು ಪರಿ ಶುದ್ಧ ವಾತಾವರಣದ ಅನುಭವ ನೀಡುವುದರ ಜೊತೆಯಲ್ಲಿ

ಸುತ್ತಮುತ್ತಲಿನ ಭೂಮಿಯ ತೇವಾಂಶವನ್ನು ಸಕ್ರಿಯವಾಗಿ ಕಾಪಾಡುತ್ತದೆ. ದೇವಾಲಯಗಳ ಕೊಳಗಳು ಸಮಗ್ರ ನೀರಿನ ಸಂಗ್ರಹಣಾ ಕಾರ್ಯಕ್ಕೆ ರಚನೆಯಾಗಿದ್ದು ಜಲವಿಜ್ಞಾನ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿದೆ, ಹಾಗು ಪರಿಸರ ಸಮತೋಲನ ಮತ್ತು ಆಧ್ಯಾತ್ಮಿಕ ಚಿಂತನೆಗಳಿಗೆ ಪವಿತ್ರ ಸ್ಥಳವಾಗಿದೆ. ಈ ಕೊಳಗಳು ಒಂದು ಕಾಲದಲ್ಲಿ ಭೂಮಿಯ ಬಾಯಾರಿಕೆಯನ್ನು ತಣಿಸುತ್ತಿತ್ತು. ಆದರೆ ಇಂದು ಅನೇಕ ಭಾಗಗಳಲ್ಲಿ ಇಂತಹ ನೀರಿನ ಸಂಪನ್ಮೂಲಗಳನ್ನು ಹೆಚ್ಚಾಗಿ ನಿರ್ಲಕ್ಷಿಸಲಾಗುತ್ತಿದೆ ಎಂದರೆ ತಪ್ಪಾಗಲಾರದು.

**ಇತಿಹಾಸ**

ಕೊಳಗಳು ಅತ್ಯಂತ ಪ್ರಮುಖ ಶಕ್ತಿಗಳಲ್ಲಿ ಒಂದಾಗಿದೆ. ಭೂಮಿಯ ಮೇಲೆ ಅಥವಾ ಕೆಳಭಾಗದಿಂದ ನೈಸರ್ಗಿಕವಾಗಿ ಹೊರಚಿಮ್ಮುವ ಮತ್ತು ನದಿಯ ದಡದಲ್ಲಿ ಅಥವಾ ಪರ್ವತದ ತಪ್ಪಲಿನಲ್ಲಿರುವ ದೇವಾಲಯಗಳ ಕೊಳಗಳು ಔಷಧೀಯ ಗುಣಗಳ ಸಾಮರ್ಥ್ಯ ಹೊಂದಿದ್ದು, ಇದರ ಉಪಯೋಗ ಅರಿತ ಪ್ರಾಚೀನ ಕಾಲದವರು, ಜಲಮೂಲಗಳನ್ನು ಸ್ವಚ್ಛವಾಗಿ ಮತ್ತು ಸಂರಕ್ಷಿತವಾಗಿಸಲು ಬಯಸಿದಾಗ ಧಾರ್ಮಿಕ ಮಟ್ಟದಲ್ಲಿ ಅದರ ಮಹತ್ವವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡು ಕಲ್ಯಾಣಿಗಳ ಸೃಷ್ಟಿ ಹಾಗೂ ಅದರ ರಕ್ಷಣೆಗಾಗಿ ಅನೇಕ ಪುರಾಣಗಳಲ್ಲಿ, ಕಲ್ಯಾಣಿಗಳನ್ನು ಕೇಂದ್ರವನ್ನಾಗಿಸಿದರು. ಕಲ್ಯಾಣಿಗಳ ಜಲವು ಆಧ್ಯಾತ್ಮಿಕ ಶುದ್ಧೀಕರಣದ ಸಂಕೇತವನ್ನು ಸೂಚಿಸುತ್ತದೆ. ಕಲ್ಯಾಣಿಗಳ ಭವ್ಯ ಶಕ್ತಿಯನ್ನು ಹಲವು ಪುರಾಣಗಳು, ವೇದ–ಉಪನಿಷತ್ತು ಮತ್ತು ದಂತಕಥೆಗಳಲ್ಲಿ ಹೇಳಲ್ಪಟ್ಟಿದೆ. ಋಗ್ವೇದದ ಕಾಲದಿಂದಲೇ ನೀರಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದ್ದು, ವೈದ್ಯಕೀಯ ಕ್ಷೇತ್ರದಲ್ಲಿಯು ಪರಿಚಯಿಸಲಾಗಿದೆ (Rath, XLVII). ಜೇನಿನಹನಿಯಂತಿರುವ ಮತ್ತು ಔಷಧೀಯ ಗುಣಗಳನ್ನು ಹೊಂದಿರುವ ನೀರನ್ನು ಮಾನವರು ಸರಿಯಾದ ರೀತಿಯಲ್ಲಿ ಸೇವಿಸಬೇಕು (Rigveda 1.23.19). ಪುರಾಣ, ಪುಣ್ಯಕಥೆಗಳು ಹಾಗೂ ವೇದಗಳಲ್ಲಿಯೂ ಸಹ ಕಲ್ಯಾಣಿಗಳ ಉಲ್ಲೇಖವಿದ್ದು ಹಲವು ವೈಶಿಷ್ಟತೆಗಳನ್ನು ಒಳಗೊಂಡಿರುವ ಜೊತೆಗೆ ಹಲವು ಚಮತ್ಕಾರಗಳಿಗೆ ಸಾಕ್ಷಿಯಾಗಿದೆ ಮತ್ತು ಮಹತ್ವದ ಪಾತ್ರವಹಿಸಿದೆ. ಅಗ್ನಿಪುರಾಣದಲ್ಲಿಯು ಸಹ ಇದರ ಬಗ್ಗೆ ಉಲ್ಲೇಖವಿದ್ದು, ಕೊಳವನ್ನು ನಿರ್ಮಿಸುವ ವ್ಯಕ್ತಿಗೆ ಅಶ್ವಮೇಧಯಜ್ಞವನ್ನು ಮಾಡಿದಷ್ಟೇ ಫಲವನ್ನು ಪಡೆಯುತ್ತಾನೆ ಎಂದು ಹೇಳಲಾಗಿದೆ. ಕೊಳಗಳ (ಕಲ್ಯಾಣಿ) ರಚನೆಯಲ್ಲಿ ಚಾಲುಕ್ಯರ ಕಾಲವನ್ನು ಸುವರ್ಣಯುಗವೆಂದೇ ಪರಿಗಣಿಸಲಾಗಿದೆ (Iyengar 2007).

ಕರ್ನಾಟಕದಲ್ಲಿ ಇಂತಹ ಹಲವಾರು ವಿಶಿಷ್ಟತೆಗಳುಳ್ಳ ಪ್ರಮುಖ ಕಲ್ಯಾಣಿಗಳಿದ್ದು ಇದರಲ್ಲಿ "ಶ್ರೀಧರ ತೀರ್ಥ", "ವರದ ಮೂಲ", "ಅಂಬು ತೀರ್ಥ", "ಗುಳಿಗುಳಿ ಶಂಕರ" ಈ ನಾಲ್ಕು ಪ್ರಮುಖ ಕಲ್ಯಾಣಿಗಳುನ್ನು ಸಹ ಒಳಗೊಂಡಿದ್ದು ತನ್ನದೇ ಆದ ಇತಿಹಾಸ, ಪೌರಾಣಿಕ, ವೈಜ್ಞಾನಿಕ ವಿಶ್ಲೇಷಣೆಗಳಿವೆ ಹಾಗೂ ಅನೇಕ ಗೌಪ್ಯತೆಯನ್ನು ತನ್ನೊಳಗೆ ಅಡಗಿಸಿಕೊಂಡಿವೆ.

**(1) ಶ್ರೀಧರ ತೀರ್ಥ**

ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕು, ವರದಪುರ ಎಂಬ ಹಳ್ಳಿಯಲ್ಲಿ ಶ್ರೀಧರ ತೀರ್ಥ ಎಂಬ ಪ್ರಸಿದ್ಧ ತಾಣವಿದ್ದು, ಇದು 1954 ರಲ್ಲಿ ಗುರುಶ್ರೀ ಶ್ರೀಧರ ಸ್ವಾಮಿಗಳ ಒಂದು ಅದ್ಭುತ ಪವಾಡದಿಂದ ನಿರ್ಮಿತವಾದ ಈ ಪರಿಶುದ್ಧ ತೀರ್ಥ ಜನರ ಹಲವು ರೋಗ ಚರ್ಮ ಕಾಯಿಲೆಗಳಿಗೆ ರಾಮಬಾಣವಾಗಿದೆ ಈ ತೀರ್ಥವು ಗುರು ಶ್ರೀಧರ ಸ್ವಾಮಿಗಳ ಆಶೀರ್ವಾದದೊಂದಿಗೆ ಔಷಧೀಯ ಗುಣಗಳನ್ನು ಹೊಂದಿವೆ ಎಂಬ ನಂಬಿಕೆ ಇದೆ. ಈ ತೀರ್ಥವು ಶ್ರೀ ಗುರುಗಳು ತಮ್ಮ ಬಲಗಾಲಿನ ಹೆಬ್ಬೆರಳಿನಿಂದ ನೆಲದ ಮೇಲೆ ಗುಂಡಿಯನ್ನು ನಿರ್ಮಿಸಿದ್ದರಿಂದ ಈ ಪವಿತ್ರ ಜಲವು ನಿರ್ಮಾಣವಾಗಿದ್ದು ಇದು ಹಲವು ಭಕ್ತರಿಗೆ ಅಮೃತ ಹಾಗೂ ಪವಿತ್ರ ತೀರ್ಥವಾಗಿದೆ. ಸುತ್ತಲೂ ಪಶ್ಚಿಮ ಘಟ್ಟಗಳು ರಮಣೀಯ ಹಸಿರು ಬಣ್ಣದ ಬೆಟ್ಟಗಳು ಕಣ್ಮನ ಸೆಳೆಯುತ್ತವೆ ಹಾಗೂ ಮನಸ್ಸಿಗೆ ಸಕಾರಾತ್ಮಕ ಶಾಂತಿಯನ್ನು ದೊರಕಿಸುವಲ್ಲಿ ಸಂದೇಹವಿಲ್ಲದ ತಾಣವಾಗಿದೆ.







**(2) ಗುಳಿಗುಳಿ ಶಂಕರ**

ಚಮತ್ಕಾರಿ ಕೊಳ ಎಂದೇ ಪ್ರಸಿದ್ಧವಾಗಿರುವ "ಗುಳಿಗುಳಿ ಶಂಕರ" ಗುಬ್ಬಿಗ ಹೊಸನಗರ ತಾಲ್ಲೂಕು ಶಿವಮೊಗ್ಗ ಜಿಲ್ಲೆಯಲ್ಲಿದ್ದು ತನ್ನದೇ ಆದ ಐತಿಹಾಸಿಕ ವಿದ್ಯಮಾನಗಳಿಗೆ ಪ್ರಚಲಿತವಾಗಿದೆ. ಕೊಳದ ಮಧ್ಯ ಭಾಗದಲ್ಲಿ ಹಸಿರು ಪಾಚಿಯಿಂದ ಆವೃತವಾದ ಬೆಳವಣಿಗೆಯು ಶಿವನ ಜಟಾ ಎಂದು ಹೇಳಲಾಗುತ್ತದೆ. ಪಾರ್ವತಿಯ

ಬಾಯಾರಿಕೆಯನ್ನು ನೀಗಿಸಲು ಶಿವನು ನಿರ್ಮಿಸಿರುವುದಾಗಿ ಪುರಾಣವಿದೆ. ಈ ಪವಿತ್ರ ನೀರಿನ ಮೂಲವು ಎಂದಿಗೂ ಒಣಗಿಲ್ಲ. ಈ ನೀರು ಅದ್ಭುತವಾದ ಔಷಧೀಯ ಗುಣಗಳನ್ನು ಹೊಂದಿದ್ದು, ವಿವಿಧ ರೀತಿಯ ರೋಗಗಳನ್ನು ಗುಣಪಡಿಸುತ್ತದೆ. ಈ ಕೊಳದ ರಹಸ್ಯವೆಂದರೆ ಬಿಲ್ವಪತ್ರೆ ಹೊರತುಪಡಿಸಿ ಬೇರೆ ಎಲೆಗಳು ನೀರಿನ ಮೇಲೆ ತೇಲುತ್ತವೆ. ಆದರೆ ಶಿವನ ನೆಚ್ಚಿನ ಎಲೆ ಬಿಲ್ವಪತ್ರೆ ಮಾತ್ರ ಕೊಳದಲ್ಲಿ ಮುಳುಗಿ ನಂತರ ನೀರಿನ ಮೇಲೆ ತೇಲುತ್ತದೆ ಹಾಗಾಗಿ ಇದನ್ನು "ಮಾಯ ಕೊಳ" ಎಂದು ಕರೆಯುತ್ತಾರೆ. ಇದರಲ್ಲಿನ ಪಾಚಿಯು ಸೂರ್ಯೋದಯ ಮತ್ತು ಸೂರ್ಯಾಸ್ತದ ಸಮಯದಲ್ಲಿ ಚಿನ್ನದ ಹೊಳಪನ್ನು ನೀಡುತ್ತದೆ. ಈ ನೀರಿನಲ್ಲಿ ಸಣ್ಣ ಸಣ್ಣ ಗುಳ್ಳೆಗಳು ನಿಯಮಿತವಾಗಿ ಕಾಣುವುದರಿಂದ ಇದನ್ನು ಗುಳಿಗುಳಿ ಶಂಕರ ಎಂದು ಕರೆಯುತ್ತಾರೆ. ಈ ನೀರನ್ನು ನೀರಾವರಿ ಮತ್ತು ಕುಡಿಯುವ ಉದ್ದೇಶಕ್ಕಾಗಿ ಬಳಸಲಾಗುತ್ತದೆ.




### (3) ಅಂಬುತೀರ್ಥ

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನಲ್ಲಿರುವ ಅಂಬುತೀರ್ಥ ಕ್ಷೇತ್ರವು ಶರಾವತಿ ನದಿಯ ಉಗಮ ಸ್ಥಾನವಾಗಿದ್ದು ಪುರಾಣ ಇತಿಹಾಸವನ್ನು ಹೊಂದಿದೆ. ಪ್ರಸಿದ್ಧ "ಜೋಗ್" ಜಲಪಾತವು ಶರಾವತಿ ನದಿಯಿಂದಾಗಿದೆ. ಈ ಸ್ಥಳವು ದಟ್ಟವಾದ ಕಾಡುಗಳಿಂದ ಆವೃತವಾಗಿದ್ದು ಎಲ್ಲರ ಕಣ್ಮನ ಸೆಳೆಯುತ್ತದೆ. ಮೂರು ಕಲ್ಯಾಣಿಗಳ ತತ್ಪರಿಣಾಮವಾಗಿ ಪರಸ್ಪರ ಸಂಪರ್ಕ ಹೊಂದಿ ನದಿಯನ್ನು ರೂಪಿಸುತ್ತದೆ ಕಲ್ಯಾಣಿಯ ಪಕ್ಕದಲ್ಲಿಯೇ ನದಿ ಹರಿಯುವುದನ್ನು ಕಾಣಬಹುದು. ರಾಮೇಶ್ವರ ದೇವರ ಪಾದದಡಿಯಲ್ಲಿ ಈ ಜಲವು ತನ್ನ ಮೂಲವನ್ನು ಪಡೆಯುತ್ತದೆ ಹಾಗೂ ನಂದಿಯ ಬಾಯಿಯಿಂದ ನೀರು ಹೊರ ಹರಿಯುತ್ತದೆ.

ಜಗತ್ಪಸಿದ್ಧ ಜಲಪಾತವನ್ನು ಸೃಷ್ಟಿಸಿರುವಂತಹ ಜೋಗ್ ವಿದ್ಯೋದ್ಗಾರದಲ್ಲಿ ಲಕ್ಷ ಲಕ್ಷ ಕಿಲೋವ್ಯಾಟ್ ವಿದ್ಯುತ್ತನ್ನು ಉತ್ಪನ್ನ ಮಾಡಿ ನಮ್ಮ ಕರುನಾಡಿಗೆ ವಿದ್ಯುತ್ತನ್ನು ನೀಡಲು ಈ ಒಂದು ನದಿಯೇ ಕಾರಣವಾಗಿದೆ ಇದನ್ನು ಕನ್ನಡ ನಾಡಿನ "ಭಾಗೀರಥಿ" ಎಂದು ಹೆಸರಿಸಲಾಗಿದೆ. ಶ್ರೀರಾಮಚಂದ್ರರು ಸೀತಾದೇವಿ ಸಮೇತ ವನವಾಸದಲ್ಲಿ ನೀರು ಸಿಗದೆ ಇದ್ದಾಗ ಸೀತಾದೇವಿಯ ಬಾಯಾರಿಕೆಯನ್ನು ನೀಗಿಸಲು ತನ್ನ ಬಿಲ್ಲು ಬಾಣದಿಂದ ನೆಲಕ್ಕೆ ಬಿಡಿದಾಗ ನೀರು ಚಿಮ್ಮಿತು, ಅದನ್ನು ಅಂದಿನಿಂದ "ಅಂಬುತೀರ್ಥ"ವೆಂದು ಪರಿಗಣನೆ ಮಾಡಲಾಗಿದೆ. ಅಂಬು ಎಂದರೆ ಬಾಣ, ಬಾಣದಿಂದ ಉದ್ಭವವಾದ ತೀರ್ಥವೇ ಅಂಬುತೀರ್ಥವಾಗಿದೆ.







### (4) ವರದ ಮೂಲ"

ನಮ್ಮ ಕನ್ನಡ ನಾಡಿನ ನದಿಗಳಿಗೆ ಅನೇಕ ಉಪನದಿಗಳು ಜನ್ಮ ತಾಳಿವೆ. ಆ ನದಿಗಳು ಜನಿಸಿದ ಸ್ಥಳಗಳು ತನ್ನದೇ ಆದ ಪವಿತ್ರತೆಯನ್ನು ಹೊಂದಿದ್ದು ಪವಿತ್ರ ಯಾತ್ರಾ ಸ್ಥಳಗಳಾಗಿ ಪರಿವರ್ತನೆಗೊಂಡು ಪ್ರಸಿದ್ಧಿ ಪಡೆದಿವೆ ಇಂಥ ಪವಿತ್ರ ಯಾತ್ರಾ ಸ್ಥಳಗಳಲ್ಲಿ ಒಂದಾದ ನಮ್ಮ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಸ್ಥಳ "ವರದ ಮೂಲ". ಹೆಸರೇ ಸೂಚಿಸಿದಂತೆ ವರದಾ ಮೂಲವು ನದಿಯ ಉಗಮ ಸ್ಥಾನವಾಗಿದೆ ವರದಾ ನದಿಯು ತುಂಗಭದ್ರಾ ನದಿಯ ಉಪನದಿಯಾಗಿದ್ದು ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನಲ್ಲಿ ಈ ಪುಣ್ಯ ಕ್ಷೇತ್ರವು ನೆಲೆಸಿದ್ದು ಪವಿತ್ರ ಕ್ಷೇತ್ರಗಳಲ್ಲಿ ಒಂದು ಎಂದು ಪಾರಂಪರಿಕವಾಗಿದೆ. ವರದಾ ಎಂದರೆ ವರವನ್ನು ಕೊಡುವ ನದಿ ಎಂದು ಹೇಳಲಾಗುತ್ತದೆ, ವರದಾಂಬೆ ದೇವಿಯ ಪಾದದಡಿಯಿಂದ ಈ ನದಿಯು ಉಗಮಗೊಂಡಿದ್ದು ಈ ಪುರಾಣ ಸ್ಥಳದಲ್ಲಿ ಮೂರು ತೀರ್ಥಗಳಿದ್ದು ಇದನ್ನು ಲಕ್ಷ್ಮಿ ತೀರ್ಥ, ಅಗ್ನಿತೀರ್ಥ ಹಾಗೂ ಚಕ್ರತೀರ್ಥ ಎಂಬ ಹೆಸರುಗಳಿವೆ, ಚಕ್ರತೀರ್ಥವು ಒಂದು ದೊಡ್ಡ ಕಲ್ಯಾಣಿಯಾಗಿದ್ದು, ಇದರಲ್ಲಿ 24 ಚಕ್ರದಂತಹ ತೀರ್ಥಗಳು ಜನ್ಮ ತಾಳುತ್ತವೆ ಎಂಬ ನಂಬಿಕೆಯಿದೆ. ಲಕ್ಷ್ಮಿತೀರ್ಥವು ದೇವರ ಪೂಜೆ ಹಾಗೂ ದೈವಿಕ ಕಾರ್ಯಗಳಿಗೆ ಮಾತ್ರ ಬಳಸಲಾಗುತ್ತದೆ ಹಾಗೂ ಅನೇಕ ಜೀವರಾಶಿಗಳಿಗೆ ಆವಾಸಸ್ಥಾನವಾಗಿದೆ. ಅಗ್ನಿ ತೀರ್ಥ ಎಂಬ ಕಲ್ಯಾಣಿಯಲ್ಲಿ ವಿಶೇಷ ಔಷಧೀಯ ಗುಣಗಳಿದ್ದು ಇದರಲ್ಲಿ ತಾಮ್ರದಂತ ಅನೇಕ ಖನಿಜ ಹಾಗೂ ಅನೇಕ ಔಷಧಿಯ ಗುಣಗಳುಳ್ಳ ಸಸ್ಯ ಸೂಕ್ಷ್ಮಾಣು (phytoplankton) ಜೀವಿಗಳು ಪತ್ತೆಯಾಗಿದ್ದು ಇವು ನೀರಿನ

ಗುಣಮಟ್ಟವನ್ನು ಹಾಗೂ ಔಷಧಿಯ ಗುಣವನ್ನು ವೃದ್ಧಿಸುವುದರೊಂದಿಗೆ ಅನೇಕ ಚರ್ಮರೋಗ, ಮಾನಸಿಕ ಕಾಯಿಲೆಗಳನ್ನು ಗುಣಪಡಿಸುವ ವಿಶೇಷ ಶಕ್ತಿಯನ್ನು ಹೊಂದಿದೆ.







ವಿಧಿವಶಾತ್ ನೋವಿನ ಸಂಗತಿ ಎನೆಂದರೆ ಇಂತಹ ಅನೇಕ ಕಲ್ಯಾಣಿಗಳು ನಮ್ಮ ನಾಡಿನಲ್ಲಿದ್ದು ಇವುಗಳು ಇಂದು ಅಳಿವಿನ ಅಂಚಿನಲ್ಲಿದ್ದು, ಪ್ರಸ್ತುತ ನಿರ್ವಹಣೆಯ ಕೊರತೆಯಿಂದಾಗಿ ಅವನತಿ ಅಂಚನ್ನು ತಲುಪುತ್ತಿದೆ. ಪ್ರತಿಯೊಂದು ಕೊಳಗಳ ಮಹತ್ವ ಅತ್ಯಂತವಾದದ್ದು ಮತ್ತು ಕುತೂಹಲಕಾರಿ ಅಂಶಗಳನ್ನು ಹೊಂದಿದೆ. ಆದರೆ ಇವುಗಳ ಪ್ರಾಮುಖ್ಯತೆಯನ್ನು ಮನುಷ್ಯ ವಿಪತ್ತುಗಳು ಒದಗಿದಾಗ ಮಾತ್ರ ಅದರ ಪಾತ್ರದ ಅರಿವು ಮೂಡಿಸಿಕೊಳ್ಳುತ್ತಾನೆ. ನೀರಿನ ಅತ್ಯಂತ ಗಮನಾರ್ಹ ಲಕ್ಷಣವೆಂದರೆ ಅದರ ಶುಚಿಗೊಳಿಸುವ ಗುಣಮಟ್ಟ ಹಾಗೂ ಸ್ವ–ಶುದ್ಧೀಕರಣತೆ ಇದು ಬಾಹ್ಯ ಹಾಗೂ ಅಂತರಂಗ ಶುದ್ಧಿಯ ಸಂಕೇತವಾಗಿದ್ದು ಆಧ್ಯಾತ್ಮಿಕ ಭಾವನೆಗಳನ್ನು ಜಾಗೃತಗೊಳಿಸುತ್ತದೆ. ಕಲ್ಯಾಣಿಗಳು ಕೇವಲ ಒಂದು ನಿಂತ ಹಾಗೂ ಸಣ್ಣ ನೀರಿನ ಕೊಳವಲ್ಲ, ಅವುಗಳು ಪ್ರಕೃತಿಯ ಒಂದು ಶಕ್ತಿಯಾಗಿ ಮಾನವನಿಗೆ ಕೊಡುಗೆಯಾಗಿರುವ ಜೀವಜಲ. ಇವುಗಳು ಅನನ್ಯ ಪರಂಪರೆಯ ಪರಿಸರ ವ್ಯವಸ್ಥೆಗಳೆಂದೇ ಹೇಳಬಹುದು, ಅನೇಕ ಕೊಳಗಳಲ್ಲಿ ವರ್ಷವಿಡೀ ನೀರನ್ನು ಹೊಂದಿರುವ ಬುಗ್ಗೆಗಳ ಮೂಲಗಳಿದ್ದು ನಿಗೂಢ ವಿಷಯ ವಿಸ್ಮಯಗಳಲ್ಲಿ ಕಲ್ಯಾಣಿಗಳು ಸಹ ಒಂದಾಗಿವೆ.

ವೇದಗಳು, ಉಪನಿಷತ್ತುಗಳು, ಸ್ಕಂದಪುರಾಣ, ಆಚಾರ್ಯ ಚರಕರ ಚರಕಸಂಹಿತ, ಸ್ಮೃತಿಗಳು ಮತ್ತು ಶ್ಲೋಕಗಳಲ್ಲಿ ಇದರ ಮಹತ್ವ ಹಾಗೂ ಸಂರಕ್ಷಣೆಯಂತಹ ಹಲವು ಮಹತ್ವದ ಮಾಹಿತಿಗಳನ್ನು ಹೇಳಲಾಗಿದೆ. ಕೊಳಗಳು ಹಾಗೂ ನೀರಿನ ಮಹತ್ವ, ನೀರಿನ ಗುಣಮಟ್ಟ, ಔಷಧೀಯಗುಣ ಮತ್ತು ಉಪಯುಕ್ತತೆ ಅದರ ಸಂರಕ್ಷಣೆಗೆ ವೇದಗಳಲ್ಲಿ ಹೆಚ್ಚಿನ ಒತ್ತು ನೀಡಲಾಗಿದೆ (Verma, Sreenivasalu (2023)). ಮಾನವನ ಕಡಿಮೆ ಹಸ್ತಕ್ಷೇಪವನ್ನು ಹೊಂದಿರುವಂತಹ ಕೊಳಗಳಲ್ಲಿ ನೀರಿನ ಗುಣಮಟ್ಟ ಮತ್ತು ಜಲಚರ ಜೀವವೈವಿಧ್ಯವು ವಿಶಿಷ್ಟವಾಗಿದೆ. ಹಲವು ಕಲ್ಯಾಣಿಗಳಲ್ಲಿ ಪ್ರಮುಖ ಸೂಕ್ಷ್ಮಜೀವಿಯು ಪತ್ತೆಯಾಗಿದ್ದು ನೀರಿನಲ್ಲಿ ಪೌಷ್ಟಿಕಾಂಶ, ಔಷಧೀಯ ಗುಣಗಳು ಪತ್ತೆಯಾಗಿದೆ ಹಾಗೂ ಸೈನೋಬ್ಯಾಕ್ಟೀರಿಯಾಗಳು, ಆಲ್ಗೆ (Algae) ಯ ಭಂಡಾರವಾಗಿದ್ದು ಪರಿಸರದ ಸಮತೋಲನದ ಕಾರ್ಯಗಳಲ್ಲಿ ತನ್ನದೇ ಆದ ಪ್ರಮುಖ ಪಾತ್ರವಹಿಸುತ್ತದೆ (Sharathchandra *et al*, (2022). ಪ್ರತಿ ಕೊಳಗಳು ಸಣ್ಣಸಣ್ಣ ಕಾರ್ಬನ್ ಸಿಂಕ್ ಗಳಾಗಿ ಕಾರ್ಯ ನಿರ್ವಹಿಸುವುದರ ಜೊತಗೆ ಪ್ರಕೃತಿಯಲ್ಲಿ ಸ್ವಚ್ಛ ವಾತಾವರಣವನ್ನು ನಿರ್ಮಿಸುವಲ್ಲಿ ಪ್ರತಿಕೂಲವಾಗಿದೆ.

ಕರ್ನಾಟಕದಾದ್ಯಂತ 500ಕ್ಕೂ ಹೆಚ್ಚು ಕಲ್ಯಾಣಿಗಳು ಮುಜುರಾಯಿ ಹಾಗೂ ಕರ್ನಾಟಕ ಧಾರ್ಮಿಕ ಪರಿಷತ್ತಿನ ಮೂಲಕ ಜಲಾಭಿಷೇಕ ಎಂಬ ಯೋಜನೆ ಅಡಿಯಲ್ಲಿ ಜೀವವನ್ನು ಪಡೆಯುತ್ತಿದ್ದು ಹಲವು NGO ಹಾಗೂ ಸ್ವಯಂ ಸೇವಾ ಸಂಘಗಳು ಕಲ್ಯಾಣಿಗಳ ಮರುಹುಟ್ಟಿಗಾಗಿ ಕೈಜೋಡಿಸಿ ಜೀವಾಂಮೃತವಾದ ಅವುಗಳ ಭವ್ಯಪರಂಪರೆಯನ್ನು ಮರುಸ್ಥಾಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

**ಸಾರಾಂಶ**

ಕಲ್ಯಾಣಿಗಳು ತಮ್ಮದೇ ಆದ ವಿಶಿಷ್ಟ ಪುರಾಣ, ಇತಿಹಾಸ, ವೈಜ್ಞಾನಿಕ, ಔಷದೀಯ ಗುಣಗಳಿದ್ದು ಅದನ್ನು ಉಳಿಸಿ ಪುನಶ್ಚೇತನಗೊಳಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ ಹಾಗೂ ಇದರ ಮೇಲೆ ಹಲವು ಸಂಶೋಧನೆಗಳು ನಡೆಯುತ್ತಿದ್ದು ಇನ್ನೂ ನಡೆಯಬೇಕಿದೆ. ಇದರ ಪ್ರಾಮುಖ್ಯತೆಯು ಹೆಚ್ಚು ಹೆಚ್ಚು ಪ್ರಚಲಿತವಾಗಬೇಕಿದೆ. ಇದರಿಂದ ಜನರಲ್ಲಿ ಜಾಗೃತಿ ಮೂಡಿ ಅಳಿವಿನಂಚಿನಲ್ಲಿರುವ ಕಲ್ಯಾಣಿಗಳನ್ನು ನಾವು ಉಳಿಸಿಕೊಳ್ಳಬಹುದು. ಕಲ್ಯಾಣಿಗಳ ಪುನಶ್ಚೇತನದ ಹಲವು ಕಾರ್ಯಗಳು ನಡೆಯುತ್ತಿದ್ದು ಮುಂದೆ ಇನ್ನಷ್ಟು ಇಂತಹ ಜೀರ್ಣೋದ್ಧಾರದಂತಹ ಕಾರ್ಯಗಳು ನಡೆಯಬೇಕಿದೆ, ಇದರಿಂದಾಗಿ ನಾವು ಪಾರಂಪರಿಕವಾಗಿ ನಿರ್ಮಿಸಲಾಗಿರುವ ಕಲ್ಯಾಣಿಗಳ ಮೌಲ್ಯವನ್ನು ಅರಿತು ಮುಂದಿನ ಪೀಳಿಗೆಗೆ ಇದರ ಬಗ್ಗೆ ಅರಿವು ಮೂಡಿಸಿ ಅದನ್ನು ಕಾಪಾಡಿಕೊಳ್ಳವ ಅನಿವಾರ್ಯತೆ ಉಂಟಾಗಿದೆ. ಬರಗಾಲದಂತಹ ಪರಿಸ್ಥಿತಿಯಲ್ಲಿ ಕಲ್ಯಾಣಿಗಳ ಪಾತ್ರ ಮಹತ್ವವಾಗಿದ್ದು, ಬರಿದಾಗದೆ ಸದಾ ಚಿಲುಮೆಯಂತಿರುವ ಹಲವು ಕಲ್ಯಾಣಿಗಳು ಪ್ರತ್ಯಕ್ಷ ಹಾಗೂ ಪಾವಿತ್ರ್ಯತೆಗೆ ಸಾಕ್ಷಿಯಾಗಿದೆ.

**ಉಲ್ಲೇಖಗಳು**


1. Verma R. Water as the elixir of life: Quotes from the Vedas and Puranas.
2. Rath SK. Concept and origin of sacred tanks. CHRJ. XLVII(1).
3. Sharathchandra K, Sridhar KR. Cyanobacterial diversity in eight lentic habitats of temples in Southwest India. Species. 2022;23(71):99-107.
4. Sreenivasalu NS. Water law and governance in India: Time Vedic to contemporary. CIFILE J Int Law. 2023;4(7):1–14.
5. Iyengar V. Research work on temples of Karnataka. Government of Karnataka; 2007. 3 vols.